## ಕನ್ನಡ ವಿಶ್ವವಿದ್ಯಾಲಯ,ಹಂಪಿ

**ವಿದ್ಯಾರಣ್ಯ-೫೮೩ ೨೭೬**

## ಮೇ ೭, ೨೦೧೬ರ ಶನಿವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೮೪ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೩. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೪. ಡಾ. ಹನುಮಣ್ಣ ನಾಯಕ ದೊರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೫. ಡಾ. ಪಿ. ಮಹಾದೇವಯ್ಯ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೦೬. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಮಾನ್ಯ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ದಿನಾಂಕ ೦೮.೦೩.೨೦೧೬ ರಂದು ಹಾಗೂ ದಿನಾಂಕ ೧೭.೦೩.೨೦೧೬ ರಂದು ಹಾಗೂ ನಡೆದ ಕಾರ್ಯಕಾರಿ ಸಮಿತಿಯ ೧೮೨ ಮತ್ತು ೧೮೩ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳನ್ನು ಪರಿಶೀಲಿಸಿ ೧೮೨ನೇ ಕಾರ್ಯಕಾರಿ ಸಮಿತಿಯ ನಿರ್ಣಯಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲು ಸೂಚಿಸಿ ನಿರ್ಣಯಗಳನ್ನು ಅನುಮೋದಿಸಲಾಯಿತು.

**೧೮೨.೦೬.** ನಿಯಮಾನುಸಾರ ಕುಲಸಚಿವರು ಡೀನ್ ಸಮಿತಿ ಸಭೆಯ ಕಾರ್ಯದರ್ಶಿಯಾಗಿರುತ್ತಾರೆ ಎಂದು ತಿದ್ದುಪಡಿ ಮಾಡಿ ಸಭೆ ಒಪ್ಪಿಗೆ ನೀಡಿತು.

**೧೮೨.೧೨.** ಕನ್ನಡ ವಿಶ್ವವಿದ್ಯಾಲಯಲ್ಲಿ ಬೋಧಕ ಸಿಬ್ಬಂದಿಗೆ ಅರ್ಧ ವೇತನ ರಜೆ ನಿಯಮಗಳನ್ನು ಜಾರಿಗೆ ತಂದ ದಿನದಿಂದ ಪೂರ್ವಾನ್ವಯಗೊಳಿಸಿ ಅನ್ವಯಿಸಿಕೊಳ್ಳಲು ಸಭೆ ಸೂಚಿಸಿತು.

**ದಿನಾಂಕ ೦೮.೦೩.೨೦೧೬ ರಂದು ಹಾಗೂ ದಿನಾಂಕ ೧೭.೦೩.೨೦೧೬ ರಂದು ಹಾಗೂ ನಡೆದ ಕಾರ್ಯಕಾರಿ ಸಮಿತಿಯ ೧೮೨ ಮತ್ತು ೧೮೩ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳ ಅನುಪಾಲನಾ ವರದಿಯನ್ನು ಸ್ಥಿರೀಕರಿಸಿ ನಿರ್ಣಯಗಳನ್ನು ಅನುಮೋದಿಸಲಾಯಿತು.

**೧೮೪.೦೧. ದಿನಾಂಕ: ೦೫.೦೪.೨೦೧೬ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ೨೦೧೫-೧೬ನೇ ಸಾಲಿನ ಅಕ್ಟೋಬರ್ ೧೫, ರಿಂದ ಡಿಸೆಂಬರ್ ೨೦೧೫ರ ವರೆಗಿನ ೩ನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆಯ ನಡೆವಳಿಗಳ ಸ್ಥಿರೀಕರಣ ಕೋರಿದೆ.**

**ನಿರ್ಣಯ:** ದಿನಾಂಕ: ೦೫.೦೪.೨೦೧೬ರಂದು ನಡೆದ ೨೦೧೫-೧೬ನೇ ಸಾಲಿನ ಅಕ್ಟೋಬರ್ ೧೫, ರಿಂದ ಡಿಸೆಂಬರ್ ೨೦೧೫ರ ವರೆಗಿನ ೩ನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆಯ ನಡೆವಳಿಗಳಿಗೆ ಅನುಮೋದನೆ ನೀಡಲಾಯಿತು.

**೧೮೪.೦೨. ದಿನಾಂಕ ೦೪.೦೪.೨೦೧೬ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಕೋರಿದೆ.**

**ನಿರ್ಣಯ:** ದಿನಾಂಕ ೦೪.೦೪.೨೦೧೬ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಮಾರ್ಗದರ್ಶಕರನ್ನು ಒಳಗೊಂಡಂತೆ ವಿಭಾಗದ ಅಧ್ಯಾಪಕರನ್ನು ಸದಸ್ಯರನ್ನಾಗಿ ಪಿಎಚ್.ಡಿ ಸಮಿತಿಗೆ ನಿಯೋಜಿಸಲು ಹಾಗೂ ಅದರ ಅಗತ್ಯತೆಯನ್ನು ಪರಿಗಣಿಸಿ ಮರುಪರಿಶೀಲಿಸಿ ಕ್ರಮವಹಿಸಲು ಮಾನ್ಯ ಕುಲಪತಿಗಳ ವಿವೇಚನೆಗೆ ಒಪ್ಪಿಸಲಾಯಿತು.

ಡೀನ್ ಸಮಿತಿಯ ನಿರ್ಣಯ ಸಂಖ್ಯೆ: ೯.೨ರ ಕಾವ್ಯಮಂಡಲ, ಬೆಂಗಳೂರು ಮಾನ್ಯತಾ ಕೇಂದ್ರ ಮತ್ತು ನಿರ್ಣಯ ಸಂಖ್ಯೆ: ೯.೩ರಲ್ಲಿ ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ ಈ ಮಾನ್ಯತಾ ಕೇಂದ್ರಗಳನ್ನು ನವೀಕರಿಸದೇ ರದ್ದುಪಡಿಸುತ್ತಿರುವುದರಿಂದ ಮತ್ತು ಸದರಿ ಕೇಂದ್ರಗಳಲ್ಲಿ ಪ್ರಗತಿ ಪರಿಶೀಲನಾ ಸಮಿತಿಗಳನ್ನು ರಚಿಸದೇ ಇರುವುದರಿಂದ ಈಗಾಗಲೇ ಈ ಕೇಂದ್ರಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಬೆಂಗಳೂರು ಕಚೇರಿ ಅಥವಾ ಹತ್ತಿರದ ಕೇಂದ್ರ ಅಥವಾ ವಿಶ್ವವಿದ್ಯಾಲಯದ ಅಧ್ಯಯನಾಂಗದಲ್ಲಿ ೬ ತಿಂಗಳಿಗೊಮ್ಮೆ ವರದಿ ಮಂಡಿಸಲು ಮತ್ತು ಡೀನ್‌ರ ಅಧ್ಯಕ್ಷತೆಯಲ್ಲಿ ಅಧ್ಯಯನದ ಪ್ರಗತಿ ಪರಿಶೀಲನೆ ಪ್ರಕ್ರಿಯೆ ನಡೆಸುವಂತೆ ಅಧ್ಯಯನಾಂಗಕ್ಕೆ ಕ್ರಮವಹಿಸಲು ಸಭೆ ಸೂಚಿಸಿತು.

**೧೮೪.೦೩. ಕನ್ನಡ ವಿಶ್ವವಿದ್ಯಾಲಯದಲ್ಲಿ ಬಂಜಾರ ಭಾಷಾ ಅಧ್ಯಯನ ಕೇಂದ್ರ ಸ್ಥಾಪನೆಗೆ ಕರ್ನಾಟಕ ಸರ್ಕಾರದ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ಬಿಡುಗಡೆಯಾದ ಅನುದಾನ ರೂ. ೧,೪೮,೮೦,೦೦೦/–ಗಳ ಪ್ರಸ್ತಾವಿತ ಯೋಜನೆ ಕುರಿತು.**

**ನಿರ್ಣಯ:** ಕನ್ನಡ ವಿಶ್ವವಿದ್ಯಾಲಯದಲ್ಲಿ ಬಂಜಾರ ಭಾಷಾ ಅಧ್ಯಯನ ಕೇಂದ್ರ ಸ್ಥಾಪನೆಗೆ ಕರ್ನಾಟಕ ಸರ್ಕಾರದ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ಬಿಡುಗಡೆಯಾದ ಅನುದಾನ ರೂ. ೧,೪೮,೮೦,೦೦೦/–ಗಳ ಪ್ರಸ್ತಾವಿತ ಯೋಜನೆಗೆ ಹಾಗೂ ಹಣ ಬಳಕೆಗೆ ಸಭೆಯು ಅನುಮೋದನೆ ನೀಡಿತು.

**೧೮೪.೦೪. ಜೈನ ಸಂಸ್ಕೃತಿ ಅಧ್ಯಯನ ಪೀಠದ ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಅನುಮೋದನೆ ಹಾಗೂ ಕರ್ನಾಟಕ ಸರ್ಕಾರವು ಬಿಡುಗಡೆಗೊಳಿಸಿರುವ ಅನುದಾನ (ರೂ.೧,೦೦,೦೦,೦೦೦/– ರೂ. ಒಂದು ಕೋಟಿ) ಬಳಕೆಗೆ ಸಂಬಂಧಿಸಿದಂತೆ.**

**ನಿರ್ಣಯ:** ಜೈನ ಸಂಸ್ಕೃತಿ ಅಧ್ಯಯನ ಪೀಠವನ್ನು ೨೦೧೬–೧೭ನೇ ಶೈಕ್ಷಣಿಕ ವರ್ಷದಿಂದ ಕಾರ್ಯಾರಂಭವಾಗುವಂತೆ ಮಾಡಲು ಸಭೆ ಸೂಚಿಸಿ ಡಾ.ಪದ್ಮ ಪ್ರಸಾದ್ ಇವರನ್ನು ಗೌರವ ನಿರ್ದೇಶಕರನ್ನಾಗಿ, ಪುರಾತತ್ವ ವಿಭಾಗದ ಡಾ.ಸಿ.ಮಹದೇವ, ಪ್ರಾಧ್ಯಾಪಕರು, ಅವರನ್ನು ಸಂಯೋಜನಾಧಿಕಾರಿಯನ್ನಾಗಿ ಕಾರ್ಯನಿರ್ವಹಿಸಲು ಆದೇಶ ನೀಡಲು ಸಭೆ ಸೂಚಿಸಿತು.

**೧೮೪.೦೫. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ದೂರಶಿಕ್ಷಣ ನಿರ್ದೇಶನಾಲಯದ ಸಮನ್ವಯ ಘಟಕಗಳನ್ನು ಸ್ಥಾಪಿಸುವ ಕುರಿತು.**

**ನಿರ್ಣಯ:** ಈ ವಿಷಯವನ್ನು ಸಾಧ್ಯಂತವಾಗಿ ಚರ್ಚಿಸಿದ ಸಭೆ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಸಮಿತಿಯು ಈ ವಿಷಯ ಕುರಿತು ಪರಿಶೀಲಿಸಿ ರೂಪುರೇಖೆಗಳನ್ನು ಸಿದ್ಧಪಡಿಸಿ ಮಾನ್ಯ ಕುಲಪತಿಯವರಿಗೆ ವರದಿಯೊಂದನ್ನು ಸಲ್ಲಿಸಲು ಸಭೆ ಸೂಚಿಸಿತು. ಈ ಸಮಿತಿಯ ಉಸ್ತುವಾರಿ, ನಿರ್ವಹಣೆಯನ್ನು ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಸಂಚಾಲಕರಾಗಿ ನಿರ್ವಹಿಸಲು ಸಭೆ ಸೂಚಿಸಿತು.

**೧೮೪.೦೬. ದೇಶೀ ಕೃಷಿ ವಿಜ್ಞಾನ ಡಿಪ್ಲೋಮಾ ಕೋರ್ಸ್ ಆರಂಭಿಸಲು ಬೇಡಿಕೆಗಳಿರುವ ಕುರಿತು.**

**ನಿರ್ಣಯ:** ವಿಜ್ಞಾನ ನಿಕಾಯದ ಅಧ್ಯಯನ ಮಂಡಳಿಯ ಮೂಲಕ ಕೃಷಿ ವಿಶ್ವವಿದ್ಯಾಲಯದ ಅಧ್ಯಾಪಕರನ್ನು ವಿಶೇಷ ತಜ್ಞರನ್ನಾಗಿ ಆಹ್ವಾನಿಸಿ ಪಠ್ಯ ಕ್ರಮವನ್ನು ಹಾಗೂ ಕೋರ್ಸ್‌ನ ಸ್ವರೂಪವನ್ನು ನಿಗದಿ ಪಡಿಸಲು ನಿರ್ದೇಶಕರು ಅಧ್ಯಯನಾಂಗ ಇವರ ಸಂಚಾಲಕತ್ವದಲ್ಲಿ ಸಮಿತಿ ರಚಿಸಿ ಆಗಷ್ಟು ಬೇಗ ವರದಿ ತರಿಸಿ ೨೦೧೬–೧೭ನೇ ಶೈಕ್ಷಣಿಕ ವರ್ಷದಲ್ಲಿ ಕೋರ್ಸ್ ಪ್ರಾರಂಭಿಸಲು ಸಭೆ ಒಪ್ಪಿಗೆ ನೀಡಿತು.

**೧೮೪.೦೭. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಬೇಡಿಕೆಗಳನ್ನು ಪರಿಗಣಿಸಿ ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಕೋರ್ಸ್‌ಗಳನ್ನು ಪ್ರಾರಂಭಿಸಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿಸ್ತರಿಸುವ ಕುರಿತು.**

**ನಿರ್ಣಯ:** ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಬೇಡಿಕೆಗಳನ್ನು ಪರಿಗಣಿಸಿ ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಕೋರ್ಸ್‌ಗಳನ್ನು ಮತ್ತು ಯಾದಗಿರಿ/ಸುರಪುರಗಳಲ್ಲಿ ಎಂ.ಎ. ಕೋರ್ಸ್ ಪ್ರಾರಂಭಿಸುವ ಕುರಿತಂತೆ ಪರಿಶೀಲನಾ ಸಮಿತಿ ರಚಿಸಲು ಮತ್ತು ಸ್ಥಳ ಪರಿಶೀಲನೆಗೆ ತಾತ್ವಿಕ ಒಪ್ಪಿಗೆ ನೀಡಿ ಕ್ರಮವಹಿಸುವ ಕುರಿತು ಮಾನ್ಯ ಕುಲಪತಿಗಳ ವಿವೇಚನೆಗೆ ಒಪ್ಪಿಸಲಾಯಿತು.

**೧೮೪.೦೮. ಕನ್ನಡ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಅಧ್ಯಯನ ಪೀಠ ಮತ್ತು ವಿಸ್ತರಣಾ ಕೇಂದ್ರಗಳ ಕಾರ್ಯನಿರ್ವಹಣೆ ಕುರಿತು.**

**ನಿರ್ಣಯ:** ಕನ್ನಡ ವಿಶ್ವವಿದ್ಯಾಲಯದ ಕುರುಬನಕಟ್ಟೆ ಕೇಂದ್ರಕ್ಕೆ ಮಂಜೂರಾಗಿರುವ ಸ್ಥಳದಲ್ಲಿ ಅನುದಾನವನ್ನು ಅನುಲಕ್ಷಿಸಿ ಕಟ್ಟಡ ನಿರ್ಮಾಣ ಕೈಗೊಳ್ಳಲು ಅನುಮತಿ ನೀಡಿತು. ಸದ್ಯ ಮಂಟೇಸ್ವಾಮಿ ಪ್ರತಿಷ್ಠಾನದ ಕಟ್ಟಡದಲ್ಲಿಯೇ ಕೇಂದ್ರದ ಕೆಲಸ ಕಾರ್ಯಗಳನ್ನು ಮುಂದುವರೆಸಲು ಮತ್ತು ಈ ಕುರಿತು ಮಂಟೇಸ್ವಾಮಿ ಪ್ರತಿಷ್ಠಾನಕ್ಕೆ ಪತ್ರ ಬರೆದು ಮನವಿ ಸಲ್ಲಿಸಲು ಸಭೆ ಸೂಚಿಸಿತು.

ಇದೇ ಶೈಕ್ಷಣಿಕ ವರ್ಷ ಜೂನ್ ೧೫, ೨೦೧೬ ರಿಂದ ಮಾರ್ಚ್ ೩೧, ೨೦೧೮ರ ವರೆಗೆ ಈ ಕೆಳಗಿನಂತೆ ಪೀಠಗಳ ಸಂಚಾಲಕರನ್ನು ನಿಯೋಜಿಸಲು ಸಭೆ ತೀರ್ಮಾನಿಸಿತು.

| | | |
|---|---|---|
| ೧. ವಾಲ್ಮೀಕಿ ಅಧ್ಯಯನ ಪೀಠ | : | ಡಾ.ಎ.ಎಸ್.ಪ್ರಭಾಕರ |
| ೨. ದಲಿತ ಅಧ್ಯಯನ ಪೀಠ | : | ಡಾ.ಎನ್.ಅಮರೇಶ ನುಗಡೋಣಿ |
| ೩. ಹಾಲುಮತ ಅಧ್ಯಯನ ಪೀಠ | : | ಡಾ.ವೀರೇಶ ಬಡಿಗೇರ |
| ೪. ದೇವರ ದಾಸಿಮಯ್ಯ ಅಧ್ಯಯನ ಪೀಠ | : | ಡಾ.ಎಸ್.ಎಸ್.ಅಂಗಡಿ |
| ೫. ಡಾ. ರಾಮಮನೋಹರ ಲೋಹಿಯಾ ಅಧ್ಯಯನ ಪೀಠ | : | ಡಾ.ಸಿ.ವೆಂಕಟೇಶ |
| ೬. ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಅಧ್ಯಯನ ಪೀಠ | : | ಮುಖ್ಯಸ್ಥರು, ಅಭಿವೃದ್ಧಿ ಅಧ್ಯಯನ ವಿಭಾಗ |
| ೭. ನಾಡೋಜ ಡಾ.ರಾಜಕುಮಾರ್ ಅಧ್ಯಯನ ಪೀಠ | : | ಡಾ.ಅಶೋಕ ಕುಮಾರ್ ರಂಜೇರೆ |
| ೮. ಶಂಬಾ ಜೋಶಿ ಅಧ್ಯಯನ ಪೀಠ | : | ಡಾ.ಶೈಲಜಾ ಹಿರೇಮಠ |
| ೯. ಪುರಂದರದಾಸ ಅಧ್ಯಯನ ಪೀಠ | : | ಡಾ.ಎಂ.ಸಿ. ಗಣೇಶ |
| ೧೦. ಶ್ರೀ ಅಭೇರಾಜ್ ಬಲ್ಡೋಟ ಜೈನ ಸಂಸ್ಕೃತಿ ಅಧ್ಯಯನ ಪೀಠ | : | ಡಾ. ತಾರೀಹಳ್ಳಿ ಹನುಮಂತಪ್ಪ |

ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಹಾಗೂ ಎನ್.ಎಸ್.ಎಸ್.ನ ಸಂಚಾಲಕರನ್ನಾಗಿ ಡಾ.ಶಿವಾನಂದ ವಿರಕ್ತಮಠ ಇವರನ್ನೂ ಎಂ.ಎ.–ಪಿಎಚ್.ಡಿ ಕೋರ್ಸ್‌ನ ಸಂಚಾಲಕರನ್ನಾಗಿ ಡಾ.ವಿಠಲರಾವ್ ಗಾಯಕ್ವಾಡ ಇವರನ್ನೂ ಏಪ್ರಿಲ್ ೨೦೧೬ ರಿಂದ ಮಾರ್ಚ್ ೩೧, ೨೦೧೮ರ ವರೆಗೆ ಎರಡು ವರ್ಷಗಳ ವರೆಗೆ ನಿಯೋಜಿಸಲು ಸಮಿತಿ ಅನುಮೋದನೆ ನೀಡಿತು.

**೧೮೪.೦೯. ಮೈಸೂರಿನ ರಂಗಾಯಣ ಸಂಸ್ಥೆಯ ನಾಟಕ ಡಿಪ್ಲೋಮಾ ಕೋರ್ಸ್‌ಗೆ ಮಾನ್ಯತೆ ನೀಡುವ ಕುರಿತು.**

**ನಿರ್ಣಯ:** ಕನ್ನಡ ವಿಶ್ವವಿದ್ಯಾಲಯದ ನಾಟಕ ಡಿಪ್ಲೋಮಾ ಕೋರ್ಸ್‌ನ್ನು ನಡೆಸಲು ಮೈಸೂರಿನ ರಂಗಾಯಣ ಸಂಸ್ಥೆಗೆ ಮಾನ್ಯತೆ ನೀಡಲು ಸಭೆ ಅನುಮತಿ ನೀಡಿತು. ಈ ಕುರಿತಂತೆ ಕ್ರಮವಹಿಸಲು ಭಾಷಾ ನಿಕಾಯದ ಡೀನ್‌ರ ಅಧ್ಯಕ್ಷತೆಯಲ್ಲಿ ಡಾ. ಶಿವಾನಂದ ವಿರಕ್ತಮಠ ಮತ್ತು ಡಾ. ಅಶೋಕ ಕುಮಾರ ರಂಜೇರೆ ಇವರು ಸದಸ್ಯರಿರುವ ಪರಿಶೀಲನಾ ಸಮಿತಿಯ ವರದಿ ಪಡೆದು ಅಧ್ಯಯನಾಂಗ ಕ್ರಮವಹಿಸಲು ಸಭೆ ಸೂಚಿಸಿತು.

**೧೮೪.೧೦. ತಾಂತ್ರಿಕ ವಿಭಾಗದ ವಿವಿಧ ವಿಷಯಗಳ ಘಟನೋತ್ತರ ಅನುಮೋದನೆ.**

**ನಿರ್ಣಯ:**

೧. ತಾಂತ್ರಿಕ ವಿಭಾಗವು ರೂಸ (RUSA)ಯೋಜನೆಗಳಡಿಯಲ್ಲಿ ಕೈಗೊಂಡು ಪೂರ್ಣಗೊಂಡಿರುವ ವಿವಿಧ ಕಾಮಗಾರಿಗಳ ರೂ.೮೧,೨೨,೭೯೧/– (ರೂ. ಎಂಬತ್ತೊಂದು ಲಕ್ಷದ ಇಪ್ಪತ್ತೆರಡು ಸಾವಿರದ ಏಳುನೂರಾ ತೊಂಬತ್ತೊಂದು ಮಾತ್ರ)ಗಳ ಪಾವತಿಗೆ ಘಟನೋತ್ತರ ಅನುಮೋದನೆ ನೀಡಿತು.

೨. ಕನ್ವೆನ್ಷನ್ ಸೆಂಟರ್ ಕಟ್ಟಡದ ಇಂಟೀರಿಯರ್ ಫರ್ನಿಷಿಂಗ್ ಕಾಮಗಾರಿಯ ಅಂತಿಮ ಬಿಲ್ಲಿನ ಮೊತ್ತ ರೂ. ೧೬,೦೫,೫೨೫/– (ರೂ. ಹದಿನಾರು ಲಕ್ಷದ ಐದು ಸಾವಿರದ ಐದುನೂರಾ ಇಪ್ಪತ್ತೈದು ಮಾತ್ರ)ಗಳ ಪಾವತಿಗೆ ಸಭೆ ಅನುಮೋದನೆ ನೀಡಿತು.

೩. ಕನ್ವೆನ್ಷನ್ ಸೆಂಟರ್ ಕಟ್ಟಡದ ಇಂಟೀರಿಯರ್ ಫರ್ನಿಷಿಂಗ್ ಕಾಮಗಾರಿಯ ಬಾಹ್ಯತಜ್ಞ ಮೂರನೇ ಸಂಸ್ಥೆ/ವ್ಯಕ್ತಿಯಿಂದ ಪರಿವೀಕ್ಷಣಾ (Third party Inspection) ವರದಿ ಸಂಭಾವನೆ ಮೊತ್ತ ರೂ. ೧,೭೦,೦೦೦/– (ರೂ. ಒಂದು ಲಕ್ಷದ ಎಪ್ಪತ್ತು ಸಾವಿರ ಮಾತ್ರ)ಗಳ ಪಾವತಿಗೆ ಸಭೆ ಅನುಮೋದನೆ ನೀಡಿತು.

೪. ಕ್ರಿಯಾಶಕ್ತಿ ಕಟ್ಟಡದ ಹಾಗೂ ಈಗಾಗಲೇ ಪೂರ್ಣಗೊಂಡ ಎಲ್ಲಾ ಕಾಮಗಾರಿಗಳನ್ನು Third party Inspection ಮಾಡಿಸಲು ಸಭೆ ಅನುಮೋದನೆ ನೀಡಿತು.

೫. ತಾಂತ್ರಿಕ ವಿಭಾಗ ಸಲ್ಲಿಸುತ್ತಿರುವ ಕಾಮಗಾರಿ/ಕಾರ್ಯಗಳ ವಿವರಗಳ ಪಟ್ಟಿಯಲ್ಲಿ ಪದೇ ಪದೇ ತಪ್ಪುಗಳಾಗುತ್ತಿರುವುದನ್ನು ಗಮನಿಸಿದ ಸಭೆ ಈ ಕುರಿತಂತೆ ವಿಭಾಗಕ್ಕೆ ಸೂಚನೆ ನೀಡಲು ಸಭೆ ಸೂಚಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

**೧೮೪.೧೧. ಎಂ.ಫಿಲ್ ಪ್ರಮಾಣ ಪತ್ರ ತಿದ್ದುಪಡಿ ಕೋರಿಕೆ ಕುರಿತು. (ಅಭಿವೃದ್ಧಿ ಅಧ್ಯಯನ ಬದಲು ಅರ್ಥಶಾಸ್ತ್ರ ಎಂದು ನಮೂದಿಸಲು ಕೋರಿದ್ದಾರೆ)**

**ನಿರ್ಣಯ:** ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈಗಾಗಲೇ ಇರುವ ನಿಯಮಗಳಡಿ (೧೮೯ನೇ ಕಾರ್ಯಕಾರಿ ಸಮಿತಿ ನಿರ್ಣಯದಂತೆ) ತಿದ್ದುಪಡಿ ಮಾಡಿ ಪ್ರಮಾಣ ಪತ್ರಗಳನ್ನು ನೀಡಲು ಸಭೆ ಅನುಮೋದಿಸಿತು.

೧೮೪.೧೨. **ಪಿಎಚ್.ಡಿ ಪದವಿ ಪ್ರಮಾಣ ಪತ್ರದಲ್ಲಿ ವಿಷಯ ತಿದ್ದುಪಡಿ. (ಜಾನಪದ ಅಧ್ಯಯನ ಬದಲು ಕನ್ನಡ ಎಂದು ನಮೋದಿಸಲು ಕೋರಿದ್ದಾರೆ)**

**ನಿರ್ಣಯ:** ಈಗಾಗಲೇ ಇರುವ ನಿಯಮಗಳಡಿ ತಿದ್ದುಪಡಿ ಮಾಡಿ ಪ್ರಮಾಣ ಪತ್ರಗಳನ್ನು ನೀಡಲು ಸಭೆ ಅನುಮೋದಿಸಿತು.

೧೮೪.೧೩. **ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಗಳ ವಿಶೇಷ ಘಟಕಕ್ಕೆ ಖರೀದಿಸಲಾದ ಪೀಠೋಪಕರಣ ರೂ. ೨೨,೦೭,೦೮೨.೦೦ ಮತ್ತು ನೆರಳಚ್ಚುಯಂತ್ರ ರೂ.೧,೭೮,೨೯೫.೦೦ಗಳಿಗೆ ಘಟನೋತ್ತರ ಅನುಮೋದನೆ ಕೋರಿದೆ.**

**ನಿರ್ಣಯ:** ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಗಳ ವಿಶೇಷ ಘಟಕಕ್ಕೆ ಖರೀದಿಸಲಾದ ಪೀಠೋಪಕರಣಗಳ ಮೊತ್ತ ರೂ. ೨೨,೦೭,೦೮೨/– (ರೂ. ಇಪ್ಪತ್ತೆರಡು ಲಕ್ಷದ ಏಳುಸಾವಿರದ ಎಂಬತ್ತೆರಡು ಮಾತ್ರ)ಗಳ ಪಾವತಿಗೆ ಹಾಗೂ ನೆರಳಚ್ಚುಯಂತ್ರ ಖರೀದಿಸಿದ ಮೊತ್ತ ರೂ.೧,೭೮,೨೯೫/–(ರೂ. ಒಂದು ಲಕ್ಷದ ಎಪ್ಪತ್ತೆಂಟುಸಾವಿರದ ಎರಡುನೂರಾ ತೊಂಬತ್ತೈದು ಮಾತ್ರ)ಗಳ ಪಾವತಿಗೆ ಅನುಮೋದನೆ ನೀಡಿತು.

೧೮೪.೧೪. **ಶ್ರೀ ಪುಟ್ಟಮಾದಯ್ಯ, ವಾಹನ ಚಾಲಕ ಇವರು ಬೆಂಗಳೂರಿನ ಕಚೇರಿಗೆ ಆಂತರಿಕ ವರ್ಗಾವಣೆ ಕೋರಿಕೆ.**

**ನಿರ್ಣಯ:** ಶ್ರೀ ಪುಟ್ಟಮಾದಯ್ಯ, ವಾಹನ ಚಾಲಕ ಇವರನ್ನು ಬೆಂಗಳೂರಿನ ಪ್ರಾದೇಶಿಕ ಕಚೇರಿ ಅಗತ್ಯದ ಹಿನ್ನೆಲೆಯಲ್ಲಿ ಆಂತರಿಕ ವರ್ಗಾವಣೆ ಮಾಡಲು ಸಭೆ ಅನುಮೋದನೆ ನೀಡಿತು.

೧೮೪.೧೫. **ಶ್ರೀ ಸತ್ಯನಾರಾಯಣ ಶೆಟ್ಟಿ, ಹಿರಿಯ ಸಹಾಯಕರು ಇವರು ದಿನಾಂಕ: ೨೮.೦೧.೨೦೧೬ರಂದು ಸ್ವಯಂ ನಿವೃತ್ತಿ ಕೋರಿ ಅರ್ಜಿಸಲ್ಲಿಸಿರುವ ಬಗ್ಗೆ.**

**ನಿರ್ಣಯ:** ಶ್ರೀ ಸತ್ಯನಾರಾಯಣ ಶೆಟ್ಟಿ, ಹಿರಿಯ ಸಹಾಯಕರು ಇವರು ದಿನಾಂಕ: ೨೮.೦೧.೨೦೧೬ರಂದು ಸಲ್ಲಿಸಿರುವ ಸ್ವಯಂ ನಿವೃತ್ತಿ ಕೋರಿಕೆ ಅರ್ಜಿಯನ್ನು ಪರಿಶೀಲಿಸಿ ಸ್ವಯಂ ನಿವೃತ್ತಿಗೆ ನಿಯಮಾನುಸಾರ ಕ್ರಮವಹಿಸಲು ಸಭೆ ಅನುಮೋದನೆ ನೀಡಿತು.

೧೮೪.೧೬. **ಶ್ರೀ ರಾಜಶೇಖರ್ ಸವಣೂರು, ಸಮನ್ವಯಾಧಿಕಾರಿ ನವದೆಹಲಿ ಇವರ ಸೇವೆ ಮುಂದುವರಿಕೆ ಹಾಗೂ ಗೌರವ ಸಂಭಾವನೆ ಹೆಚ್ಚಳದ ಕೋರಿಕೆ ಬಗ್ಗೆ.**

**ನಿರ್ಣಯ:** ಶ್ರೀ ರಾಜಶೇಖರ್ ಸವಣೂರು, ಸಮನ್ವಯಾಧಿಕಾರಿ ನವದೆಹಲಿ ಇವರ ಸೇವೆ ಮುಂದುವರಿಕೆ ಹಾಗೂ ಗೌರವ ಸಂಭಾವನೆ ಹೆಚ್ಚಳದ ಕೋರಿಕೆಯನ್ನು ಸಭೆ ಪರಿಶೀಲಿಸಿ ಸದ್ಯ ಇನ್ನೂ ೬ ತಿಂಗಳ ಅವಧಿಗೆ ಮಾಸಿಕ ರೂ.೧೨,೦೦೦/–ರಂತೆಯೇ ಮುಂದುವರಿಸಲು ತೀರ್ಮಾನಿಸಿತು.

೧೮೪.೧೭. **ಶ್ರೀ ಪಿ.ಎಸ್. ಕರುಣಾಕರ, ಪ್ರಥಮದರ್ಜೆ ಸಹಾಯಕ ಇವರ ಪ್ರಕರಣದಲ್ಲಿ ನಿವೃತ್ತ ಜಿಲ್ಲಾ ನ್ಯಾಯಧೀಶರಾದ ಶ್ರೀ ಬಿ.ಎ. ಮುಚ್ಚಂಡಿ ಇವರು ನೀಡಿರುವ ವರದಿ ಕುರಿತು ಕ್ರಮದ ಬಗೆಗೆ.**

**ನಿರ್ಣಯ:** ಶ್ರೀ ಪಿ.ಎಸ್.ಕರುಣಾಕರ, ಪ್ರಥಮ ದರ್ಜೆ ಸಹಾಯಕ ಇವರ ಪ್ರಕರಣದ ವಿಚಾರಣೆಗಾಗಿ ನಿಯೋಜಿಸಿದ್ದ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ.ಬಿ.ಎ.ಮುಚ್ಚಂಡಿಯವರು ವಿಚಾರಣೆ ಮುಗಿಸಿ ಸಲ್ಲಿಸಿರುವ ವರದಿಯಲ್ಲಿ ಶ್ರೀ ಪಿ.ಎಸ್.ಕರುಣಾಕರ ಅವರ ಮೇಲಿನ ಎಲ್ಲ ಏಳೂ ಆರೋಪಗಳು ಸಾಬೀತಾಗಿದ್ದು, ಶಿಸ್ತುಕ್ರಮಕ್ಕೆ ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಸಭೆ ಈ ಕೆಳಕಂಡ ನಿರ್ಣಯವನ್ನು ಕೈಗೊಂಡಿದೆ.

ಶ್ರೀ ಪಿ.ಎಸ್.ಕರುಣಾಕರ ಇವರಿಗೆ ನೀಡಲಾದ ಮುಂಬಡ್ತಿಗಳನ್ನು ಹಿಂಪಡೆದು ಇವರು ವಿಶ್ವವಿದ್ಯಾಲಯಕ್ಕೆ ಮೊದಲು ಖಾಯಂ ಆಗಿ ಸೇರ್ಪಡೆಗೊಂಡ/ನೇಮಕಗೊಂಡ ಅನುಚರ ಹುದ್ದೆಯಲ್ಲಿ ಉಳಿಸಲು, ಅಮಾನತು ಅವಧಿಯಲ್ಲಿ ಕಡಿತಗೊಳಿಸಿರುವ ವೇತನವನ್ನು ದಂಡರೂಪವಾಗಿ ಪರಿಗಣಿಸಲು ಸಭೆಯು ಸೂಚಿಸಿತು. ಶ್ರೀ ಪಿ.ಎಸ್.ಕರುಣಾಕರ ಅವರು ಆದೇಶ ಹೊರಟ ಒಂದು ವಾರದ ಒಳಗಾಗಿ ಅನುಚರ ಹುದ್ದೆಯನ್ನು ಒಪ್ಪಿ ವರದಿ ಮಾಕೊಳ್ಳದಿದ್ದಲ್ಲಿ ಅವರನ್ನು ಕೆಲಸದಿಂದ ವಜಾಗೊಳಿಸಲು ಸಭೆ ನಿರ್ಣಯಿಸಿತು.

೧೮೪.೧೮. **ಶ್ರೀ ಸೋಮನಾಥ ಎಚ್.ಎಂ. ಅಧೀಕ್ಷಕರು ಇವರು ತಮ್ಮ ಕಚೇರಿ ವೇಳೆಯಲ್ಲಿ ಆಡಳಿತಕ್ಕೆ ಅಡಚಣೆಯಾಗುವಂತಹ ರೀತಿಯಲ್ಲಿ ಮಾಹಿತಿಹಕ್ಕು ನಿಯಮದಡಿ ಮಾಹಿತಿಗಳನ್ನು ಕೋರುತ್ತಿರುವುದು ಹಾಗೂ ಅನಧಿಕೃತ ಗೈರುಹಾಜರಾಗಿ ಪೊಲೀಸರಿಂದ ದಸ್ತಗಿರಿಯಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು ವಿಶ್ವವಿದ್ಯಾಲಯಕ್ಕೆ ಮಾಹಿತಿ ನೀಡದೇ ಇರುವ ಬಗ್ಗೆ.**

**ನಿರ್ಣಯ:** ಶ್ರೀ ಸೋಮನಾಥ ಎಚ್.ಎಂ. ಇವರು ಈ ಹಿಂದಿನಿಂದಲೂ ಆಡಳಿತಾಧಿಕಾರಿಗಳ ವಿರುದ್ದ ಸಲ್ಲದ ಆರೋಪಗಳನ್ನು ಮಾಡುತ್ತ ಪತ್ರ ಬರೆದಿರುವುದು, ಕಚೇರಿ ವೇಳೆಯಲ್ಲಿ ತನ್ನ ವೈಯಕ್ತಿಕ ಹಿತಾಸಕ್ತಿಗೆ ಅನುಗುಣವಾಗಿ ಮಾಹಿತಿ ಹಕ್ಕಿನಡಿ ಮಾಹಿತಿ ಕೋರಿ ಪತ್ರ ನೀಡುತ್ತಿರುವುದು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ, ಆಡಳಿತದ ವಿರುದ್ಧ ಪ್ರಚೋದನೆ ನೀಡುತ್ತಿರುವುದು, ಅದಕ್ಕೆ ಸಂಬಂಧಿಸಿ ಪತ್ರಗಳನ್ನು ಹಂಚುತ್ತಿರುವ ಮತ್ತು ತಾಂತ್ರಿಕ ವಿಭಾಗದಲ್ಲಿ ತನಗೆ ಸಂಬಂಧಿಸಿರದ ಕಾಮಗಾರಿಯ ವಿವರಗಳನ್ನು ಕೇಳುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ ಈ ಕೆಳಕಂಡಂತೆ ನಿರ್ಣಯ ಮಾಡಲಾಯಿತು.

ಶ್ರೀ ಸೋಮನಾಥ ಎಚ್.ಎಂ. ಅವರು ವಿಶ್ವವಿದ್ಯಾಲಯದ ಉದ್ಯೋಗಿಯಾಗಿದ್ದುಕೊಂಡು ಕಚೇರಿ ವೇಳೆಯಲ್ಲಿ ಮಾಹಿತಿ ಹಕ್ಕಿನ ಅಡಿಯಲ್ಲಿ ಕೋರುವ ಮಾಹಿತಿಗಳು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರದೆ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರನ್ನು, ಆಡಳಿತಾಧಿಕಾರಿಗಳನ್ನು ಅವಹೇಳನ ಮಾಡುವ, ವಿಶ್ವವಿದ್ಯಾಲಯವನ್ನು ರೂಪಿಸಿದ ಹಿರಿಯರನ್ನು, ಅಧ್ಯಾಪಕರನ್ನು ಆಯ್ಕೆ ಮಾಡಿದ ತಜ್ಞರನ್ನು, ಅವಮಾನಿಸುವ ಉದ್ದೇಶಗಳನ್ನು ಹೊಂದಿರುವುದರಿಂದ ಯಾವುದೇ ಮಾಹಿತಿಯನ್ನು ನೀಡಬಾರದೆಂದು ಮತ್ತು ಈ ಎಲ್ಲ ವಿಚಾರಗಳಿಗೆ ಸಂಬಂಧಿಸಿ ಸದರಿಯವರಿಂದ ವಿವರಣೆ ಪಡೆದು ಸೂಕ್ತ ಶಿಸ್ತುಕ್ರಮ ಕೈಗೊಳ್ಳಬೇಕೆಂದು ಸಭೆ ನಿರ್ಣಯಿಸಿತು.

**೧೮೪.೧೯. ಡಾ. ಎಂ. ಚಿದಾನಂದಮೂರ್ತಿ, ಬೆಂಗಳೂರು ಇವರ ಪತ್ರ "ದೇವರ ದಾಸಿಮಯ್ಯ"/"ಜೇಡರ ದಾಸಿಮಯ್ಯ" ಹೆಸರುಗಳ ಕುರಿತು.**

**ನಿರ್ಣಯ:** ಡಾ. ಎಂ. ಚಿದಾನಂದಮೂರ್ತಿ, ಬೆಂಗಳೂರು ಇವರ ಪತ್ರ "ದೇವರ ದಾಸಿಮಯ್ಯ"/"ಜೇಡರ ದಾಸಿಮಯ್ಯ" ಹೆಸರುಗಳ ಕುರಿತಂತೆ ಪೀಠ ಸ್ಥಾಪನೆ ಕುರಿತು ಸರ್ಕಾರದ ಆದೇಶದ ಪತ್ರದಲ್ಲಿ ದಾಖಲಿಸಿರುವಂತೆ ಬಳಕೆ ಮಾಡಲು ಸಭೆ ಸೂಚಿಸಿತು.

**೧೮೪.೨೦. ದಿನಾಂಕ: ೨೫.೦೪.೨೦೧೬ರಂದು ನಡೆದ ಗ್ರಂಥಾಲಯ ಸಲಹಾ ಸಮಿತಿ ಸಭೆ (೩೫)ರ ನಡವಳಿಗಳಿಗೆ ಸ್ಥಿರೀಕರಣ ಕೋರಿದೆ.**

**ನಿರ್ಣಯ:** ದಿನಾಂಕ: ೨೫.೦೪.೨೦೧೬ರಂದು ನಡೆದ ಗ್ರಂಥಾಲಯ ಸಲಹಾ ಸಮಿತಿ ಸಭೆ (೩೫)ರ ನಡವಳಿಗಳಿಗೆ ಅನುಮೋದನೆ ನೀಡಲಾಯಿತು.

**೧೮೪.೨೧. ಶ್ರೀ ತಿಮ್ಮೇಶ್ ಓ. ಇವರು ವಿಶ್ವವಿದ್ಯಾಲಯದ ಶೀಘ್ರಲಿಪಿಗಾರರ ಹುದ್ದೆಯಲ್ಲಿ ಮುಂದುವರೆಯಲು ಇಚ್ಛಿಸಿದ್ದು, ಅವಕಾಶ ಮಾಡಿಕೊಡಬೇಕಾಗಿ ಕೋರಿ ಮನವಿ ಪತ್ರ.**

**ನಿರ್ಣಯ:** ಶ್ರೀ ತಿಮ್ಮೇಶ್ ಓ. ಇವರು ವಿಶ್ವವಿದ್ಯಾಲಯದ ಶೀಘ್ರಲಿಪಿಗಾರರ ಹುದ್ದೆಯಲ್ಲಿ ಮುಂದುವರೆಯಲು ಇಚ್ಛಿಸಿದ್ದು, ಅವಕಾಶ ಮಾಡಿಕೊಡಬೇಕಾಗಿ ಕೋರಿ ಮನವಿ ಪತ್ರವನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾಲಯ ಸೇವೆಗೆ ಹಿಂದಿರುಗಿದ ನಂತರ ಉದ್ಭವಿಸಬಹುದಾದ ಯಾವುದೇ ಕಾನೂನಾತ್ಮಕ ತೊಡಕುಗಳಿಗೆ ತಿಮ್ಮೇಶ್ ಓ. ಅವರೇ ಹೊಣೆಗಾರರಾಗಿರುವ ಷರತ್ತಿಗೊಳಪಡಿಸಿ, ಸದರಿಯವರಿಂದ ಮುಚ್ಚಳಿಕೆ ಪಡೆದು ಕ್ರಮವಹಿಸಲು ಒಪ್ಪಿಗೆ ನೀಡಿತು.

**೧೮೪.೨೨. ಪರಿಶಿಷ್ಟಜಾತಿ ವಿದ್ಯಾರ್ಥಿಗಳಿಗೆ ವಸತಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಂದ ಬಿಡುಗಡೆಯಾದ ರೂ. ೮,೦೦,೦೦೦.೦೦ (ರೂ. ಎಂಟು ಕೋಟಿ)ಗಳ ಅನುದಾನ ಕುರಿತು.**

**ನಿರ್ಣಯ:** ಪರಿಶಿಷ್ಟಜಾತಿ ವಿದ್ಯಾರ್ಥಿಗಳಿಗೆ ವಸತಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಂದ ಬಿಡುಗಡೆಯಾದ ರೂ. ೮,೦೦,೦೦೦.೦೦ (ರೂ. ಎಂಟು ಕೋಟಿ)ಗಳ ಅನುದಾನ ಬಳಕೆಗೆ ಮತ್ತು ಸದರಿ ಕಾಮಗಾರಿಗಳನ್ನು ಹಾಗೂ ಇನ್ನುಮುಂದೆ ಹೊಸ ಕಾಮಗಾರಿಗಳನ್ನು ಟೆಂಡರ್ ಬದಲಾಗಿ ನಿಯಮಾನುಸಾರ ಮೂಲಭೂತ ಸೌಲಭ್ಯ ನಿರ್ಮಾಣ ನಿಗಮದಿಂದ ನಿರ್ವಹಿಸಲು ತಾಂತ್ರಿಕ ವಿಭಾಗವು ಪರಿಶೀಲಿಸಿ ಕ್ರಮವಹಿಸಲು ಸಭೆ ತೀರ್ಮಾನಿಸಿತು.

**೧೮೪.೨೩. ವಿಶ್ವವಿದ್ಯಾಲಯದ ಪೀಠಗಳು ಮತ್ತು ಡೀನ್‌ಗಳ ಕಚೇರಿಯನ್ನು ರೂಪಿಸುವ ಕುರಿತು.**

**ನಿರ್ಣಯ:** ವಿಶ್ವವಿದ್ಯಾಲಯದ ಎಲ್ಲಾ ಪೀಠ ಮತ್ತು ಡೀನ್‌ಗಳಿಗೆ ಒಂದು ಕಚೇರಿಯನ್ನು ರೂಪಿಸಿ ನೀಡಲು ಸಭೆ ತೀರ್ಮಾನಿಸಿತು.

**೧೮೪.೨೪. ಡಾ.ಬಿ.ಎಂ.ಪುಟ್ಟಯ್ಯ, ಪ್ರಾಧ್ಯಾಪಕರು ಇವರು ಕುಪ್ಪಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರಕ್ಕೆ ಪ್ರತಿನಿಯೋಜನೆ ಮನವಿ ಕುರಿತು.**

**ನಿರ್ಣಯ:** ಡಾ.ಬಿ.ಎಂ.ಪುಟ್ಟಯ್ಯ ಅವರು **ಕುವೆಂಪು ಕಾದಂಬರಿಗಳಲ್ಲಿ ಪರಿಸರ** ಎಂಬ ವೈಯಕ್ತಿಕ ಯೋಜನೆ ಹಾಗೂ ಇದರ ಜೊತೆಗೆ **ಹಂದಿಗೋಡು ಸಿಂಡ್ರೋಮ್ ರೋಗದ ಪರಿಣಾಮಗಳು ಹಾಗೂ ರೋಗಿಗಳ ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳು** ಎಂಬ ಯೋಜನೆಗಳನ್ನು ನಿರ್ವಹಿಸಲು ಕುಪ್ಪಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರಕ್ಕೆ ಪ್ರತಿ ನಿಯೋಜನೆಗಾಗಿ ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿದ ಸಭೆಯು ಮೇಲಿನ ಎರಡೂ ಯೋಜನೆಗಳನ್ನು ಕೈಗೊಳ್ಳಲು ಎರಡು ವರ್ಷಗಳ ಅವಧಿಗೆ ಅಥವಾ ಯೋಜನೆ ಪೂರ್ಣಗೊಳ್ಳುವವರೆಗೆ ಕುಪ್ಪಳಿ, ಕುವೆಂಪು ಕನ್ನಡ ಅಧ್ಯಯನ ಕೇಂದ್ರಕ್ಕೆ ಪ್ರತಿನಿಯೋಜನೆ ಮೇಲೆ ನಿಯೋಜಿಸಿಲು ಸಭೆ ತೀರ್ಮಾನಿಸಿತು.

**೧೮೪.೨೫. ಕನ್ನಡ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳ ಕುರಿತು.**

**ನಿರ್ಣಯ:** ವೃಂದ ಮತ್ತು ನೇಮಕಾತಿ/ಮುಂಬಡ್ತಿಗಳಿಗೆ ಸಂಬಂಧಿಸಿದಂತೆ ತುರ್ತಾಗಿ ಡಿ.ಪಿ.ಎ.ಆರ್ ನಿಂದ ಅನುಮತಿ ಪಡೆದು, ಸಭೆ ನಡೆಸಿ ಕ್ರಮವಹಿಸಲು ಸಭೆ ಸೂಚಿಸಿತು.

**೧೮೪.೨೭. ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರ ಮನವಿ ಪತ್ರ ಕುರಿತು.**

**ನಿರ್ಣಯ:** ಮಹಿಳಾ ಅಧ್ಯಯನ ಕೇಂದ್ರಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

೧. ದಿನಾಂಕ ೨೫.೫.೨೦೧೭ರ ಒಳಗಾಗಿ ಮಹಿಳಾ ಅಧ್ಯಯನ ಕೇಂದ್ರದ ಇದುವರೆಗಿನ ಖರ್ಚುವೆಚ್ಚಗಳ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಲು ನಿರ್ದೇಶಕರಿಗೆ ಸೂಚಿಸುವುದು.

೨. ಕಳೆದ ಶೈಕ್ಷಣಿಕ ವರ್ಷಗಳಲ್ಲಿ ಕೇಂದ್ರದಿಂದ ಕೈಗೊಳ್ಳಲಾದ ಯೋಜನೆಗಳನ್ನು ನಿಗದಿತ ಸಮಯದಲ್ಲಿ ದಿನಾಂಕ. ೨೦.೫.೨೦೧೭ರ ಒಳಗಾಗಿ ಅಧಿಕೃತ ಪ್ರತಿಗಳನ್ನು ಸಲ್ಲಿಸಲು ಸೂಚಿಸುವುದು.

೩. ಮಾರ್ಚ್ ೮, ೨೦೧೭ರಂದು ನಡೆದ ೧೮೨ನೇ ಕಾರ್ಯಕಾರಿ ಸಮಿತಿ ನಿರ್ಣಯ ೧೮೨.೦೫ರಂತೆ ಕ್ರಮವಹಿಸುವುದು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| **ಕುಲಸಚಿವರು** | **ಕುಲಪತಿಗಳು** |
| **(ಪದನಿಮಿತ್ತ ಕಾರ್ಯದರ್ಶಿ)** | **(ಅಧ್ಯಕ್ಷರು)** |